# ಕಿಡ್ನಾಪ್ ಆಗಿದ್ದ ಹರಿಪ್ರಿಯಾ ಪಾರಾಗಿದ್ದು ಹೇಗೆ ಗೊತ್ತೆ?

**ತುಪ್ಪದ ಹುಡುಗಿಗಾಗಿ ಗೆಳೆಯರಿಬ್ಬರು ಹೋಟೆಲ್‌ನಲ್ಲಿ ಹೊಡೆದಾಡಿಕೊಂಡಿದ್ದು, ಮಳೆಹುಡುಗಿ ಹೋಟೆಲೊಂದರಲ್ಲಿ ಲಕ್ಷಾಂತರ ರೂಪಾಯಿ ಬಾಕಿ ಉಳಿಸಿಕೊಂಡಿದ್ದಾಳೆ ಎನ್ನುವ ಸುದ್ದಿಗಳು ಇತ್ತೀಚೆಗೆ ಕನ್ನಡ ಚಿತ್ರರಂಗದಲ್ಲಿ ವೈರಲ್ ಆಗಿದ್ದವು. ಆದರೆ, ಕನ್ನಡ ಚಿತ್ರರಂಗದ ಟಾಪ್ 1 ನಾಯಕಿ ಅಪಹರಣಕ್ಕೊಳಗಾಗಿದ್ದ ರೋಚಕ ಸುದ್ದಿ 'ಸುಧಾ'ದ ಸಿನಿಮಾ ವರದಿಗಾರ್ತಿ ಗೌರಿ ಅವರಿಗೆ ದೊರೆತಿದೆ. ಭಯೋತ್ಪಾದಕರಿಂದ ಅಪಹರಣಕ್ಕೊಳಗಾದ ಕನ್ನಡದ ಖ್ಯಾತ ನಟಿ ಹರಿಪ್ರಿಯಾ, ಅವರಿಂದ ಪಾರಾಗಿ ಬಂದ ಸುದ್ದಿಯಿದು. ಅಂದಹಾಗೆ, ಹರಿಪ್ರಿಯಾ ಅವರನ್ನು ಅಪಹರಿಸಿದವರು ಯಾರು? ಅವರು ಪಾರಾಗಿ ಬಂದದ್ದು ಹೇಗೆ?**

ನಾಯಕಿ ಖಳರ ಕೈಗೆ ಸಿಕ್ಕಿಬೀಳುವುದು, ನಾಯಕ ಮಧ್ಯಪ್ರವೇಶಿಸಿ ಖಳರನ್ನು ಸದೆಬಡಿದು ನಾಯಕಿಯನ್ನು ರಕ್ಷಿಸುವ ದೃಶ್ಯಗಳನ್ನು ಸಾಕಷ್ಟು ಸಿನಿಮಾಗಳಲ್ಲಿ ನೋಡಿರುತ್ತೇವೆ. ಕೆಲವು ಸಲ ಸಿನಿಮಾ ನಟರ ಬದುಕಿನಲ್ಲಿಯೂ ಸಿನಿಮೀಯ ಘಟನೆಗಳು ನಡೆಯುವುದುಂಟು. ಅಂಥದ್ದೇ ಒಂದು ಘಟನೆಗೆ ಕನ್ನಡದ ನಟಿ ಹರಿಪ್ರಿಯಾ ಕೆಲವು ವಾರಗಳ ಹಿಂದೆ ಸಾಕ್ಷಿಯಾಗಿದ್ದರು. ಆದರೆ ಸಿನಿಮಾಗಳಲ್ಲಿಯೂ ಘಟಿಸಲೂ ಅಸಾಧ್ಯವಾದಂಥ ಸಿನಿಮೀಯ ಘಟನೆ.

ಇದುವರೆಗೆ ಆ ಘಟನೆಯ ಬಗ್ಗೆ ಹರಿಪ್ರಿಯಾ ಸಾರ್ವಜನಿಕವಾಗಿ ಎಲ್ಲಿಯೂ ಸುಳಿವು ಬಿಟ್ಟುಕೊಟ್ಟಿಲ್ಲ. ರಾಷ್ಟ್ರೀಯ ಭದ್ರತಾ ಹಿತದೃಷ್ಟಿಯಿಂದ ಈ ಮಾಹಿತಿಯನ್ನು ಬಹಿರಂಗಪಡಿಸದಂತೆ ಹರಿಪ್ರಿಯಾ ಮತ್ತವರ ಕುಟುಂಬಕ್ಕೆ ಬೇಹುಗಾರಿಕೆ ದಳ ಸೂಚನೆ ನೀಡಿತ್ತು. ಆದರೆ ತಮ್ಮ ಆಪ್ತವಲಯದಲ್ಲಿ ಅವರು ಈ ಘಟನೆಯನ್ನು ಹಂಚಿಕೊಂಡಿದ್ದು, ಹರಿಪ್ರಿಯಾ ಅವರ ಧ್ವನಿಯ ದೂರವಾಣಿ ಆಡಿಯೊ 'ಸುಧಾ' ತಂಡಕ್ಕೆ ಲಭ್ಯವಾಗಿದೆ.

ಫೆಬ್ರುವರಿ 14ರಂದು ಜಮ್ಮು ಕಾಶ್ಮೀರದ ಪುಲ್ವಾಮಾದಲ್ಲಿ ಭಾರತೀಯ ಸೈನಿಕರ ಮೇಲೆ ಭಯೋತ್ಪಾದಕ ದಾಳಿಯಾದ ವಿಷಯ ಎಲ್ಲರಿಗೂ ಗೊತ್ತಿದೆ. ಅದಾಗಿ ಸರಿಯಾಗಿ ಹದಿನೈದು ದಿನಗಳ ನಂತರ ಅಂದರೆ ಫೆ. 29ರಂದು ಕನ್ನಡದ ಬಹುಬೇಡಿಕೆಯ ನಟಿ ಹರಿಪ್ರಿಯಾ, ಪಾಕಿಸ್ತಾನಿ ಸೈನಿಕರ ವಶದಲ್ಲಿದ್ದರು ಎಂಬ ಸ್ಫೋಟಕ ಮಾಹಿತಿ ಬಹಿರಂಗಗೊಂಡಿದೆ. ನಂಬುವುದು ಕಷ್ಟ. ಆದರೆ ನಂಬಲೇಬೇಕು.

## ನಡೆದಿದ್ದು ಇಷ್ಟು

ಶ್ರೀನಗರದಿಂದ 88 ಕಿ.ಮೀ. ದೂರದಲ್ಲಿ ಡೋಂಗಿವಾಲ್ ಎಂಬ ಸ್ಥಳವಿದೆ. ವರ್ಷವಿಡೀ ಕೊರೆಯುವ ಚಳಿಯಿರುವ ಆ ಜಾಗ ಭಾರತ ಮತ್ತು ಪಾಕಿಸ್ತಾನ್ ಗಡಿಯಿಂದ ಅನತಿ ದೂರದಲ್ಲಿದೆ. ಹೊರಜಗತ್ತಿಗೆ ಜಾಸ್ತಿ ಪರಿಚಿತವಲ್ಲದ ಆ ಮನೋಹರ ಸ್ಥಳದಲ್ಲಿ 'ಎಲ್ಲಿದ್ದೆ ಇಲ್ಲೀತನಕ' ಸಿನಿಮಾ ಹಾಡಿನ ಚಿತ್ರೀಕರಣ ಮಾಡುವ ಉದ್ದೇಶದಿಂದ ಸೃಜನ್ ಲೋಕೇಶ್, ಹರಿಪ್ರಿಯ ಮತ್ತು ಸಿನಿಮಾ ತಂಡ ಬೀಡು ಬಿಟ್ಟಿತ್ತು. ಪ್ರತಿದಿನ ಬೆಳಿಗ್ಗೆ ಮತ್ತು ಸಂಜೆ ಭದ್ರತಾ ಪಡೆ ಸಿಬ್ಬಂದಿ ಸ್ಥಳಕ್ಕೆ ಬಂದು ಪರಿಶೀಲನೆ ನಡೆಸಿ ಹೋಗುತ್ತಿದ್ದರು. 29ರಂದು ಭದ್ರತಾ ಪಡೆ ಸಿಬ್ಬಂದಿ ಬಂದು ಹೋಗಿರುವುದನ್ನು ಖಚಿತಪಡಿಸಿಕೊಂಡಿರುವ ಕೆಲವು ಮುಸುಕುಧಾರಿಗಳು ಮಧ್ಯಾಹ್ನದ ಊಟದ ಬಿಡುವಿನ ಸಂದರ್ಭದಲ್ಲಿ ಚಿತ್ರತಂಡದ ಮೇಲೆ ದಾಳಿ ಮಾಡಿದ್ದಾರೆ.

'ಅಲ್ಲಿ ಕ್ಯಾರಾವಾನ್ ಇರಲಿಲ್ಲ. ಮೈ ಕೊರೆಯುವಷ್ಟು ಚಳಿ. ಊಟ ಮುಗಿಸಿದ ನಾನು ಅದೇ ಹಿಮದ ಮೇಲೆ ಫೋಟೊಗಳಿಗೆ ಪೋಸ್ ಕೊಡ್ತಾ ನಿಂತಿದ್ದೆ. ಆಗಲೇ ನನ್ನ ಹಿಂದಿನ ಮರದ ಹಿಂದಿನಿಂದ 'ಚಲೋ' ಎಂಬ ಗಟ್ಟಿ ದನಿ ಕೇಳ್ತು. ತಿರುಗಿ ನೋಡ್ತೀನಿ, ಎಂಟ್ಹತ್ತು ಮುಸುಕುಧಾರಿಗಳು ಕೈಯಲ್ಲಿ ಗನ್ ಹಿಡಿದುಕೊಂಡು ನನ್ನ ಕಡೆಗೇ ಓಡಿ ಬರ್ತಿದ್ದಾರೆ. ಎದೆ ಧಸಕ್ ಅಂತು. ಹೆದರಿಕೆಯಿಂದ ಕೂಗಲೂ ಸಾಧ್ಯವಾಗದೆ ಅಲ್ಲಿ ಹಿಮದ ಮೇಲೆಯೇ ಕುಸಿದುಬಿದ್ದೆ. ಅವರಲ್ಲಿ ಒಬ್ಬ ನನ್ನ ಬಳಿ ಕೂತು ಎರಡೂ ಕೈಗಳನ್ನು ಬೆನ್ನಿಗೆ ಒತ್ತಿ ಹಿಡಿದುಕೊಂಡ. ನಾನು ಕೂಗಲು ಟ್ರೈ ಮಾಡ್ತಿರೋದು ನೋಡಿ 'ಚುಪ್...' ಎಂದು ಗದರಿದ. ಹತ್ತು ನಿಮಿಷದಲ್ಲಿ ಇಡೀ ಚಿತ್ರತಂಡದ ಎಲ್ಲರೂ ನನ್ನ ಹತ್ತಿರವೇ ಸೇರಿ ಕೂತರು. ನಮ್ಮ ಸುತ್ತಲೂ ಅವರು ಗನ್ ಹಿಡಿದು ನಿಂತಿದ್ದರು. ನನ್ನ ಪಕ್ಕ ಕೂತುಕೊಂಡ ಸೃಜನ್ ಬಿಕ್ಕಿ ಬಿಕ್ಕಿ ಅಳ್ತಿದ್ರು. ನಂಗೆ ಅಳಲಿಕ್ಕೂ ಧೈರ್ಯ ಇಲ್ದೆ ಸುಮ್ನೆ ಕೂತಿದ್ದೆ. ಇನ್ನು ನನ್ನ ಜೀವನ ಮುಗಿದೇಹೋಯ್ತು ಅಂತ ಅನಿಸ್ತು. ನಾನು ನಟಿಯಾಗಿರದೇ ಇದ್ದರೆ ಇಲ್ಲಿಗೆ ಬರ್ತಿರ್ಲಿಲ್ಲ. ಇವರ ಕೈಗೆ ಸಿಕ್ಕಾಕಿಕೊಳ್ತಿರ್ಲಿಲ್ಲ. ಹೇಗೋ ಬದುಕಿಕೊಂಡು ಇರಬಹುದಿತ್ತು ಅನಿಸಿತು' ಎಂದು ಹರಿಪ್ರಿಯಾ ಆಪ್ತರ ಬಳಿ ಹೇಳಿಕೊಂಡಿರುವುದು ಆಡಿಯೊದಲ್ಲಿದೆ.

'ಎಲ್ಲಿದ್ದೆ ಇಲ್ಲೀತನಕ' ಚಿತ್ರತಂಡದ ಮೇಲೆ ದಾಳಿ ಮಾಡಿದ ತಂಡ ಪಾಕ್ ಗಡಿರೇಖೆಯಿಂದ ನುಸುಳಿ ಬಂದವರು ಎನ್ನಲಾಗಿದೆ. ಸುಮಾರು ಮೂರು ಗಂಟೆಗಳ ಕಾಲ ಇಡೀ ಚಿತ್ರರಂಗ ಅವರ ವಶದಲ್ಲಿತ್ತು.

ಉಗ್ರರ ಕೈಯಲ್ಲಿ ಸಿಕ್ಕು ಪ್ರಾಣದ ಆಸೆಯನ್ನೇ ತೊರೆದಿದ್ದ ಹರಿಪ್ರಿಯಾ ಮತ್ತು ಚಿತ್ರತಂಡ ಅವರ ಕೈಯಲ್ಲಿಂದ ತಪ್ಪಿಸಿಕೊಂಡು ಬಂದಿದ್ದೂ ಪವಾಡಸದೃಶ ಘಟನೆಯೇ. ತಂಡದ ಮೇಲೆ ದಾಳಿ ಮಾಡಿದ ಉಗ್ರರಲ್ಲಿ ಹರಿಪ್ರಿಯಾ ಅಭಿಮಾನಿಯೊಬ್ಬ ಇದ್ದ ಎಂಬ ಸಂಗತಿಯನ್ನು ನಮಗಷ್ಟೇ ಅಲ್ಲ, ಸ್ವತಃ ಹರಿಪ್ರಿಯಾ ಅವರಿಗೂ ನಂಬುವುದು ಕಷ್ಟವಾಗಿತ್ತಂತೆ.



ಹರಿಪ್ರಿಯಾ ಉಗ್ರರಿಂದ ಅಪಹರಣಕ್ಕೊಳಗಾಗಿದ್ದ ಸುದ್ದಿ ಕೇಳಿ ನಿಜಕ್ಕೂ ಆಘಾತವಾಯ್ತು. ಉಗ್ರಗಾಮಿಯೊಬ್ಬ ನಾನು ಬರೆದ ಹಾಡನ್ನು ಮೊಬೈಲ್ ಕಾಲರ್ ಟ್ಯೂನ್ ಇಟ್ಟುಕೊಂಡಿದ್ದು ಕೇಳಿ ನಗಬೇಕೋ ಅಳಬೇಕೋ ತಿಳಿಯುತ್ತಿಲ್ಲ. ಒಂದೆಡೆ ಸಂತೋಷವಾಗುತ್ತಿದೆ. ಇನ್ನೊಂದೆಡೆಗೆ ಭಯವೂ ಆಗ್ತಿದೆ.

—ವಿಕ್ರಮ್ ಹತ್ವಾರ್, ಗೀತ ಸಾಹಿತಿ